ಮುಂದುವರೆಸಬೇಕು. ಕೋಲಾರ ಜಿಲ್ಲೆಗೆ ಕನಿಷ್ಟ, ಹಿಂದಿನ ವರ್ಷ ೪೫೭೦ ಗುರಿ ಇತ್ತು, ಇಷ್ಟನ್ನಾದರೂ ಮುಂದುವರೆಸಲೇ ಬೇಕು. ನಮಗೆ ಬೇರೆ ಮಾರ್ಗವೇ ಇಲ್ಲ, ದಾರಿಯೇ ಇಲ್ಲ.

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೆ, ಈಗ ಏನಾಗಿದೆ ಎಂದರೆ, ಈ ಮಧ್ಯೆ ಗಲಾಟೆಯಲ್ಲಿ ಗಮನಸೆಳೆಯುವ ಸೂಚನೆಗಳು ಇವೆಲ್ಲಾ ನಿಮಗೆ ಪರಿಚಯವಿಲ್ಲ. ನೀವು ಸರ್ಕಾರದ ಗಮನವನ್ನು ಸೆಳೆಯುತ್ತೀರಿ, ಅವರು ನಿಮಗೆ ಒಂದು ಹೇಳಿಕೆಯ ನಕಲು ಪ್ರತಿಯನ್ನು ಕೊಟ್ಟು ಹೇಳಿಕೆಯನ್ನು ಓದುತ್ತಾರೆ. ಅದರ ಮೇಲೆ ಸ್ಪಷ್ಟೀಕರಣ ಕೇಳತಕ್ಕಂತಹದ್ದು, ಸುಮಾರು ಜನ ಸದಸ್ಯರುಗಳ ಕೈ ಎತ್ತಿದ್ದೀರಿ. ಗಮನ ಸೆಳೆಯುವ ಸೂಚನೆಗೆ ಯಾರು ಸಹಿ ಹಾಕಿರುತ್ತಾರೆ, ಅವರಿಗೆ ಸ್ಪಷ್ಟೀಕರಣ ಕೇಳತಕ್ಕಂತಹ ಹಕ್ಕಿರುತ್ತದೆ. ಅವರ ಸ್ಪಷ್ಟೀಕರಣವನ್ನು ಕೇಳಿದ್ದೀರಿ ದಯಮಾಡಿ, ಎತ್ತಿರತಕ್ಕಂತಹ ಕೈಗಳು ಕೆಳಗಿಳಿಸಿ.

ಶ್ರೀ ವಾಟಾಳ್ ನಾಗರಾಜ್ : ನಾನು ಸ್ಪಷ್ಟೀಕರಣವನ್ನು ಕೇಳುತ್ತಿಲ್ಲ, ಇವತ್ತು ಈ ಪ್ರಶ್ನೋತ್ತರ ಕಾಲವಿಲ್ಲವೆಂದು ತಾವು ತೀರ್ಮಾನ ಮಾಡಿದ್ದೀರಿ? ನಮ್ಮೆಲ್ಲರ ಗತಿಯೇನು?

ಅಧ್ಯಕ್ಷರು : ಹೌದು, ನಾನೇನು ಮಾಡಲಿ, ಪ್ರಶ್ನೋತ್ತರ ಕಾಲ ಮುಗಿದಿದೆ. ಶ್ರೀಮಾನ್, ಶಿವನಂಜಪ್ಪ, ಶಿವರಾಮೇಗೌಡ, ಜಯಚಂದ್ರ, ಶಿವಕುಮಾರ್, ಮುದ್ದಹನುಮೇಗೌಡ ಮತ್ತು ನಂಜಮರಿಯವರು ಇವರೆಲ್ಲಾ ಸೇರಿ ಕೊಬ್ಬರಿ ಬೆಲೆ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಆಮೇಲೆ ಮಾತನಾಡೋಣ ನಂಜಮರಿಯವರ ಕೂತುಕೊಳ್ಳಿ, ನಿಮ್ಮ ಆತುರ ನನಗೆ ಗೊತ್ತಿದೆ, ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ, ಮೊದಲು ಅವರು ಗಮನ ಸೆಳೆಯಲಿ.

ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿದಿರುವುದರಿಂದ ತುಮಕೂರು, ಹಾಸನ, ಮಂಡ್ಯ, ಚಿತ್ರದುರ್ಗ ಹಾಗೂ ಇತರ ಜಿಲ್ಲೆಗಳ ತೆಂಗು ಬೆಳೆಗಾರರಿಗೆ ಉಂಟಾಗಿರುವ ತೊಂದರೆ.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಅಧ್ಯಕ್ಷರ ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿದಿರುವುದರಿಂದ ತುಮಕೂರು, ಹಾಸನ, ಮಂಡ್ಯ ಚಿತ್ರದುರ್ಗ ಹಾಗೂ ಇತರ ಜಿಲ್ಲೆಗಳ ತೆಂಗು ಬೆಳೆಗಾರರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಕೃಷಿ ಮಾರುಕಟ್ಟೆ ರಾಜ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜಿ.ಜಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ, ಜಿ.ಎಸ್. ಶಿವನಂಜಪ್ಪ, ಎಲ್.ಆರ್. ಶಿವರಾಮೇಗೌಡ, ಟಿ.ಬಿ.ಜಯಚಂದ್ರ, ಡಿ.ಕೆ. ಶಿವಕುಮಾರ್, ಮುದ್ದಹನುಮೇಗೌಡ ಹಾಗೂ ಇತರರು ತಂದಿರುವ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡಂತೆ ಉತ್ತರವನ್ನು ನೀಡುತ್ತಿದ್ದೇನೆ.

ಕೊಬ್ಬರಿಗೆ ರಾಜ್ಯದಲ್ಲಿ ತಿಪಟೂರು, ಅರಸೀಕರೆ ಪ್ರಾಮುಖ್ಯ ಮಾರುಕಟ್ಟೆಗಳಾಗಿವೆ. ಹುಳಿಯಾರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಕೆ.ಆರ್. ಪೇಟೆ, ಚೆನ್ನರಾಯಪಟ್ಟಣ ಈ ಮಾರುಕಟ್ಟೆಗಳಲ್ಲಿ ತೆಂಗಿನಕಾಯಿ, ವ್ಯಾಪಾರ ನಡೆದೂ ಸಹ ಕೊಬ್ಬರಿ ಮಾರಾಟ ವ್ಯವಹಾರ ಸಾಕಷ್ಟು ಇರುವುದಿಲ್ಲ.

ಕೇಂದ್ರ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಕೊಬ್ಬರಿಗೆ (ಗಿಟುಕು) ರೂ ೨೭೨೫-೦೦ ಮತ್ತು ಎಣ್ಣೆ ಕೊಬ್ಬರಿಗೆ ರೂ ೨೫೦೦-೦೦ ಗಳ ಬೆಂಬಲ ಬೆಲೆಯನ್ನು ಘೋಷಿಸಿದೆ ಇತ್ತೀಚೆಗೆ ರಾಜ್ಯದಲ್ಲಿ ಕೊಬ್ಬರಿ ಬೆಲೆಯ ಕುಸಿತದಿಂದ ರೈತರಿಗೆ ನಷ್ಟವುಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದ್ದು ಇದಕ್ಕೆ ಪ್ರಮುಖವಾಗಿ ತಮಿಳುನಾಡು ಹಾಗೂ ಆಂಧ್ರಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೊಬ್ಬರಿ ಉತ್ಪಾದನೆಯಾಗುತ್ತಿದ್ದು ಸಾಂಪ್ರದಾಯಿಕ ತೆಂಗಿನಎಣ್ಣೆ ಉಪಯೋಗದ ಬದಲಾಗಿ ಸೂರ್ಯಕಾಂತಿ ಎಣ್ಣೆ ಹಾಗೂ ಇನ್ನೀತರ ಎಣ್ಣೆಗಳ ಬಳಕೆ ಹೆಚ್ಚಾಗುತ್ತಿರುವುದು ಕಾರಣವಾಗಿದೆ. ಇದಲ್ಲದೆ ಕೊಬ್ಬರಿಯನ್ನು ಆಮದುಮಾಡಿಕೊಳ್ಳುತ್ತಿದ್ದ ಉತ್ತರ ಭಾರತದ ಭಾಗಗಳಿಂದ ರಾಜ್ಯದ ಕೊಬ್ಬರಿಗೆ ಬೇಡಿಕೆ ಕಡಿಮೆಯಾಗುತ್ತಿದೆ. ತಮಿಳುನಾಡು ಮತ್ತು ಕೇರಳ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೊಬ್ಬರಿ ತಯಾರಿಕೆ ಆಗುತ್ತಿರುವುದು ರಾಜ್ಯದಲ್ಲಿ ಕೊಬ್ಬರಿಗೆ ಬೇಡಿಕೆ ಕಡಿಮೆಯಾಗಿ ಬೆಲೆ ಕುಸಿತಕ್ಕೆ ಕಾರಣವಾಗಿದೆ.

ಕೊಬ್ಬರಿ ಧಾರಣೆ ಕುಸಿದಿರುವುದರಿಂದ ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆಗೆ ಕೊಬ್ಬರಿಯನ್ನು ಖರೀದಿಸಬೇಕೆಂದು ಕೃಷಿ ಮಾರಾಟ ಇಲಾಖೆಯನ್ನು ನಾಫೇಡ್ (ನ್ಯಾಶನಲ್ ಮಾರ್ಕೆಟಿಂಗ್ ಫೆಡರೇಷನ್) ಸಂಖ್ಯೆಯನ್ನು ವಿನಂತಿಸಿದ ಮೇರೆಗೆ ಸದರಿ ಸಂಖ್ಯೆಯ ಪ್ರಾಂಗದಲ್ಲಿ ಕೊಬ್ಬರಿಯನ್ನು ಖರೀದಿಸಲು ಪ್ರಾರಂಭವಾಗಿದೆ. ಈ ಬಗ್ಗೆ ರೈತರಿಗೆ ತಿಳುವಳಿಕೆ ನೀಡಲು ವೃತ್ತ ಪತ್ರಿಕೆಗಳಲ್ಲಿ ಆಕಾಶವಾಣಿ ಮೂಲಕ ಪ್ರಚಾರ ನೀಡಲಾಗಿದೆ. ನಾಫೆಡ್ ಸಂಸ್ಥೆಯು ತಿಪಟೂರಿನಲ್ಲಿ ಮಾರುಕಟ್ಟೆ ಪ್ರವೇಶಿಸಿ ಕೊಬ್ಬರಿಯನ್ನು ಬೆಂಬಲ ಬೆಲೆಗೆ ಖರೀದಿಸಲು ಪ್ರಾರಂಭಿಸಿದ್ದು ರೈತರು ತರುವಂತಹ ಪೂರ್ಣ ಪ್ರಮಾಣದ ಕೊಬ್ಬರಿಯನ್ನು ಖರೀದಿಸಲು ಸಿದ್ಧವಿರುತ್ತದೆ. ಕೊಬ್ಬರಿಯನ್ನು ಖರೀದಸಲು ಹಣಕಾಸಿನ ಅಡಚಣೆ ಇರುವುದಿಲ್ಲವೆಂದು ನಾಫೆಡ್ ಸಂಸ್ಥೆ ಅಧಿಕಾರಿಗಳು ತಿಳಿಸಿರುತ್ತಾರೆ.

ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದೈನಂದಿನ ಬೆಲೆಗಳನ್ನು ಗಮನಿಸಿ ಬೆಲೆ ಕಡಿಮೆ ಆದಂತಹ ಸಂದರ್ಭದಲ್ಲಿ ಬೆಂಬಲ ಬೆಲೆಗೆ ಖರೀದಿಸಲು ನಾಫೆಡ್ ಸಂಸ್ಥೆಯೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿದೆ.

ಅಧ್ಯಕ್ಷರು : ಶಿವನಂಜಪ್ಪನವರೆ, ನೀವು ಸ್ಪಷ್ಟೀಕರಣವನ್ನು ಕೇಳಿ.

ಶ್ರೀ ಜಿ.ಎಸ್. ಶಿವನಂಜಪ್ಪ : ನಾಫೆಡ್ ಸಂಸ್ಥೆಯು ತಿಪಟೂರಿನಲ್ಲಿ ಮಾರುಕಟ್ಟೆ ಪ್ರವೇಶಿಸಿ ಕೊಬ್ಬರಿಯನ್ನು ಬೆಂಬಲ ಬೆಲೆಗೆ ಖರೀದಿಸಲು ಪ್ರಾರಂಭಿಸಿದ್ದು ರೈತರು ತರುವಂತಹ ಪೂರ್ಣ ಪ್ರಮಾಣದ ಕೊಬ್ಬರಿಯನ್ನು ಖರೀದಿಸಲು ಸಿದ್ದವಿರುತ್ತದೆ. ಕೊಬ್ಬರಿಯನ್ನು ಖರೀದಿಸಲು ಹಣಕಾಸಿನ ಅಡಚಣೆಯಿರುವುದಿಲ್ಲವೆಂದು ನಾಪೆಡ್ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆಂದು ನಮ್ಮ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈಗ ನಮ್ಮ ಒಂದು ನಡವಳಿಕೆ ಏನಾಗಿದೆ ಎಂದರೆ, ತಿಪಟೂರಿಗೆ ಹೋದರೆ, ಅವರು ೧೧.೦೦ ಗಂಟೆಗೆ ಸೊಸೈಟಿಯ ಬಾಗಿಲನ್ನು ತೆರೆಯಬೇಕು, ಆ ವೇಳೆಗೆ ಬಾಗಿಲೇ ತೆಗೆಯುವುದಿಲ್ಲ. ಬಂದಂತ ರೈತರಿಂದ ಇವತ್ತು ಕೊಬ್ಬರಿಯನ್ನು ಕೊಂಡುಕೊಂಡರೆ, ಅವತ್ತೆ ಹಣ ಕೊಡುತ್ತಾ ಇಲ್ಲ. ೧೫ ದಿವಸಕ್ಕೆ ಬನ್ನಿ ೨೦ ದಿವಸಕ್ಕೆ ಬನ್ನಿ ಎಂದು ಹೇಳುತ್ತಿದ್ದಾರೆ. ಇದರಿಂದ ತುಂಬಾ ತೊಂದರೆಯಾಗುತ್ತದೆ. ಇದರ ಬಗ್ಗೆ ಏನಾದರೂ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು

ನೀವು ಮಾಡುತ್ತೀರಾ, ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತೇನೆ, ಮಿಕ್ಕ ವಿಚಾರವನ್ನು, ನಂಜಮರಿಯವರು, ಮತ್ತೆ ಶಿವಕುಮಾರ್ ರವರು ಮಾತನಾಡುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಅಧ್ಯಕ್ಷರೆ, ಈ ಕೊಬ್ಬರಿ ಸಮಸ್ಯೆ ಕೇವಲ ಹಾಸನ, ಚೆನ್ನರಾಯಪಟ್ಟಣ, ತುಮಕೂರು, ತಿಪಟೂರು ಇಲ್ಲಿ ಮಾತ್ರವೇ ಇಲ್ಲ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಚೆನ್ನಪಟ್ಟಣ, ರಾಮನಗರ, ಕನಕಪುರದಲ್ಲೂ ಕೂಡ ಸುಮಾರು ೭೦ ಭಾಗ ಈ ತೆಂಗಿನ ಪಸಲು ಕೂಡ ಕಡಿಮೆಯಾಗಿದೆ. ತೆಂಗಿನ ಪಸಲು ಕಡಿಮೆಯಾದಂತ ಸಂದರ್ಭದಲ್ಲಿ, ಇದಕ್ಕೆ ಉತ್ತಮವಾದ ಬೆಲೆ ಸಿಗುತ್ತಿಲ್ಲ. ತಮಗೆಲ್ಲ ಗೊತ್ತಿದೆ, ತೆಂಗಿನ ಕಾಯಿಯ ಬೆಲೆಯೇ ಸುಮಾರು ಎರಡೂವರೆ, ಮೂರು ರೂಪಾಯಿಗೆ ಇಳಿದಿದೆ. ಒಳ್ಳೆಯ ತೆಂಗಿನ ಕಾಯಿಯ ಬೆಲೆ ಈಗ ಸುಮಾರು ಮೂರು ರೂಪಾಯಿಗೆ ಇಳಿದಿದೆ. ಈಗ ಆ ಕೊಬ್ಬರಿಗೂ ಕೂಡ ತುಂಬಾ ತೊಂದರೆಯಾಗಿದೆ. ನಿಮಗೆ ಗೊತ್ತಿರುವಂತೆ ಕರಿಯ ತಲೆಹುಳು ಜಾಸ್ತಿಯಾದರೂ ಕೂಡ, ಅದಕ್ಕೆ ನಮ್ಮ ಸರ್ಕಾರದಿಂದ, ತೋಟಗಾರಿಕೆ ಇಲಾಖೆಯಿಂದ ಕರಿತಲೆ ಹುಳುವನ್ನು ಕಡಿಮೆ ಮಾಡುವುದಕ್ಕೆ ಈಗ ಸರಿಯಾಗಿ ವ್ಯವಸ್ಥೆ ಮಾಡದಿರುವುದರಿಂದ, ನಮಗೆ ಇವತ್ತು ತೆಂಗಿನ ಕಾಯಿಗಾಗಲಿ, ಕೊಬ್ಬರಿಗಾಗಲಿ ಬೆಲೆ ಸಿಗುತ್ತಿಲ್ಲ, ಸರ್ಕಾರದ ನಾಫೆಡ್ ಒಂದೇ ಅಲ್ಲ, ಇದನ್ನು ಆಫಕಾಮ್ಸ ರೀತಿ ಏನಾದರೂ ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಮಾಡಿ, ತಾವು ಅದನ್ನು ಬೆಂಗಳೂರು ಗ್ರಾಮಾಂತರ ಪ್ರದೇಶಕ್ಕೂ ವಿಸ್ತರಣೆ ಮಾಡಿ. ನಾವು ಯಾವ ರೀತಿ ಕಬ್ಬಿಗೆ ಬೆಲೆಯನ್ನು ನಿಗದಿ ಮಾಡುತ್ತೇವೆ ಅದೇ ರೀತಿ ಕೊಬ್ಬರಿಗೂ ಬೆಲೆಯನ್ನು ನಿಗಧಿ ಮಾಡಿ ಸರ್ಕಾರವೇ ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೆಂದು ನಮ್ಮಮಾನ್ಯ ಕೃಷಿ ಮಾರುಕಟ್ಟೆ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನೀವು ತುಮಕೂರಿನಲ್ಲಿ ಯಾವರೀತಿ ಮಾಡಿದ್ದೀರಿ, ಅದೇರೀತಿ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲೂ ಕೂಡ ಕೊಬ್ಬರಿಯನ್ನು ಕೊಳ್ಳುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಬೆಳೆಯತಕ್ಕಂತಹ ತೆಂಗಿನ ಬೆಳೆ ಏನಿದೆ, ಅದನ್ನು ಖರೀದಿಸುವುದಕ್ಕೆ ತಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಸಭಾಧ್ಯಕ್ಷರೆ, ಸನ್ಮಾನ್ಯ ಸಚಿವರು ಉತ್ತರದಿಂದ ಒಂದು ರೀತಿಯ ಗಾಬರಿ ಕೂಡ ಉಂಟಾಗುತ್ತಿದೆ. ನಾನು ನಿಮ್ಮನ್ನು ಅಭಿನಂದನೆ ಮಾಡಬೇಕು. ತಾವು ಯುವಕರಾಗಿದ್ದೀರಿ, ತಮ್ಮ ಕಾಲದಲ್ಲಿ ಈ ಒಂದು ಬೆಂಬಲ ಬೆಲೆಯನ್ನು ಕೊಡತಕ್ಕಂತ ಒಂದು ಪದ್ಧತಿಯನ್ನು ಕೂಡ ಜಾರಿಗೆ ತಂದಿದ್ದೀರಿ, ಅದಕ್ಕೆ ನಾನು ಅಭಿನಂದಿಸುತ್ತೇನೆ. ಆದರೆ ನೀವು ಉತ್ತರವನ್ನು ಕೊಡುವಾಗ, ಕೊಬ್ಬರಿಯನ್ನು ಅಮದು ಮಾಡಿಕೊಳ್ಳುತ್ತಿದ್ದೇವೆನ್ನತಕ್ಕಂತ ಮಾತನ್ನೂ ಕೂಡ ಹೇಳಿದ್ದೀರಿ. ನೀವು ಕೊಬ್ಬರಿಯನ್ನು ಅಮದು ಮಾಡಿಕೊಳ್ಳಲು ಹೊರಟರೆ, ನಮ್ಮ ಪರಿಸ್ಥಿತಿ ಏನಾಗುತ್ತದೆ ಎಂಬುದರ ಬಗ್ಗೆ ತಾವು ಚಿಂತನೆ ಮಾಡಬೇಕು. ಎಲ್ಲಿ ಬೆಳೆ ಇಲ್ಲ, ಬೆಳೆ ಇಲ್ಲದಿರುವ ಸಂದರ್ಭದಲ್ಲೂ ಬೆಲೆನೂ ಇಲ್ಲದಿರುವ ಸಂದರ್ಭದಲ್ಲಿ, ಕೊಬ್ಬರಿ ಅಮದು ಮಾಡಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ತಾವು ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎನ್ನುವುದರ ಬಗ್ಗೆ ತಾವು

ಉತ್ತರದಲ್ಲಿ ಹೇಳಲಿಲ್ಲ. ನನಗೆ ಬಹಳ ದುಃಖವಾಗುತ್ತದೆ. ನೀವು ತಿಪಟೂರು ಮತ್ತು ಅರಸಿಕೆರೆ ಪ್ರಮುಖವಾದ ಮಾರುಕಟ್ಟೆಗಳು, ಹುಳಿಯಾರ್, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಕೆ.ಆರ್. ಪಟ್ಟಣ, ಚಿನ್ನರಾಯಪಟ್ಟಣ ಅವು ಯಾವುವು ಅಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಇದರಿಂದ ಕೂಡ ರೈತರ ಶೋಷಣೆಯಾಗುವುದಕ್ಕೆ ಅವಕಾಶವಿದೆ. ನೀವು ನಾಫೆಡ್‌ನಿಂದ ಬರತಕ್ಕಂತಹ ಸೀಮಿತವಾದ ಸಹಾಯದ ಮುಖಾಂತರ ಈ ಎರಡೇ ಮಾರುಕಟ್ಟೆಗೆ ಸಹಾಯ ಮಾಡುತ್ತೀರಿ. ಬೇರೆ ಕಡೆ ಖರೀದಿ ಮಾಡಲು ಅವಕಾಶ ಕೊಡದೆ ಇರತಕ್ಕಂತಹ ಸಂದರ್ಭದಲ್ಲಿ ಇದು ಹೆಚ್ಚಿನ ಶೋಷಣೆಯಾಗುವುದಕ್ಕೆ ಅವಕಾಶವಾಗುತ್ತದೆ. ದಯಮಾಡಿ, ಎಲ್ಲಾ ಮಾರುಕಟ್ಟೆಗಳಲ್ಲೂ ಕೂಡ, ಇವತ್ತು ಕೇಂದ್ರದ್ದು ಸುಮಾರು ಎಂಟು ಹತ್ತು ಮಾರುಕಟ್ಟೆಗಳಿರಬಹುದು. ಆ ಎಂಟು ಹತ್ತು ಮಾರುಕಟ್ಟೆಗಳಲ್ಲೂ ಕೂಡ ಕೊಳ್ಳತಕ್ಕಂತಹ ವ್ಯವಸ್ಥೆಯನ್ನು ನೀವು ಮಾಡಬೇಕು ಮತ್ತು ಕೇಂದ್ರ ಸರ್ಕಾರ ಮೇಲೆ ಒತ್ತಾಯವನ್ನು ತರುವುದರ ಜೊತೆಗೆ ಬಹಳ ಪ್ರಮುಖವಾಗಿರತಕ್ಕಂತಹದ್ದು, ನಾನು ಮೊನ್ನೆ ಪತ್ರಿಕೆಯಲ್ಲಿ ನೋಡಿದೆ ಕೇವಲ ಬೆಂಬಲ ಬೆಲೆಯನ್ನು ಕೊಡಲು ಕೇಂದ್ರ ಸರ್ಕಾರ ತನ್ನ ಆಯವ್ಯಯದಲ್ಲಿ ೧೬೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದರ ಬಹುತೇಕ ಹಣವನ್ನು ಕೇರಳ ರಾಜ್ಯದವರೇ ಉಪಯೋಗಿಸಿಕೊಳ್ಳತಕ್ಕಂತಹ ಸಾಧ್ಯತೆ ಇದೆ. ಇವತ್ತು ೧೬೦ ಕೋಟಿ ರೂಪಾಯಿಯಲ್ಲಿ ನಮ್ಮ ಸರ್ಕಾರಕ್ಕೆ ಬಿಡುಗಡೆ ಮಾಡಿರತಕ್ಕಂತಹದ್ದು ಕೇವಲ ೧೦ ಕೋಟಿ ರೂಪಾಯಿಗಳು ಮಾತ್ರ. ಅದೇ ೧೦ ಕೋಟಿ ರೂಪಾಯಿಯಲ್ಲಿ ಪ್ರತಿ ವರ್ಷ ರೊಟೇಷನ್ ಮಾಡಿ, ವರ್ಷ ಪೂರ್ತಿ ಕಾಲಕಳೆಯುತ್ತೀರಿ. ಅಂದರೆ, ಇರತಕ್ಕಂತಹ ಸಂಪೂರ್ಣ ಹಣವನ್ನು, ಮತ್ತು ಅದರ ಲಾಭವನ್ನು ಇವತ್ತು ಕೇರಳದವರು ಮಾಡಿಕೊಳ್ಳುತ್ತಾರೆ. ಇದರಿಂದ ಅವರೇ ಬಹಳ ಹೆಸರುವಾಸಿಯಾಗಿರತಕ್ಕಂತಹದ್ದು. ಕೊಕೊನೆಟ್ ಬೋರ್ಡ್ ಇರತಕ್ಕಂತಹದ್ದು.

ಅಧ್ಯಕ್ಷರು : ಜಯಚಂದ್ರರವರೆ, ನೀವು ತುಂಬಾ ಹಿರಿಯ ಸದಸ್ಯರು. You are the deputy leader of the congress party. Please understand me. Some of you should realise that this is a calling attention notice and the Minister has made a statement on which you have to seek clarification. But you have been delivering a lecture. Please tell me, how can I conduct the proceedings? I can advice new members, but not senior members like you.

ಶ್ರೀ ಟಿ.ಬಿ. ಜಯಚಂದ್ರ : ಕೆ.ಎಂ.ಎಫ್‌ನಿಂದ ತಾವುಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಎಂದು ಒತ್ತಾಯ ಇದೆ. ಅದನ್ನು ಮಾಡುತ್ತೀರೋ ದಯಮಾಡಿ ಹೇಳಿ.

+ ಶ್ರೀ ಬಿ.ಬಿ. ನಿಂಗಯ್ಯ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸಮರ್ಪಕವಾದ ಉತ್ತರವನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇನೆ. ಆದರೂ ಸಹ ಇಮೊತ್ತು ರಾಜ್ಯದಲ್ಲಿ ತೆಂಗಿನ ಬೆಲೆ ಸಾಕಷ್ಟು ಕುಂಠಿತವಾಗಿರತಕ್ಕಂಥದ್ದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಕಾರಣಗಳು ಏನು ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ಹೆಚ್ಚಿನ

ಪ್ರಮಾಣದಲ್ಲಿ ಕೊಬ್ಬರಿಯನ್ನು ಉತ್ಪಾದನೆ ಮಾಡುತ್ತಿರತಕ್ಕಂಥದ್ದು ಒಂದು ಆದರೆ ಎರಡನೆಯದು ನಮ್ಮಲ್ಲಿ ಸಾಮಾನ್ಯವಾಗಿ ಸಾಂಪ್ರದಾಯಿಕವಾದಂತಹ ತೆಂಗಿನ ಎಣ್ಣೆಯ ಉಪಯೋಗ ಈಗ ಬದಲಾಗಿ ಸೂರ್ಯಕಾಂತಿ ಬೇರೆ ಬೇರೆ ಎಣ್ಣೆಗಳನ್ನು ಬಳಸತಕ್ಕಂಥದ್ದು ಮತ್ತೊಂದು ಕಾರಣವಾಗಿದೆ. ಅದು ಅಲ್ಲದೆ ಈಗ ಕೊಬ್ಬರಿಯನ್ನು ಅಮದು ಮಾಡಿ ಕೊಳ್ಳುತ್ತಿದ್ದೇವೆ ಎನ್ನತಕ್ಕಂಥದ್ದನ್ನು ನಮ್ಮ ಹಿರಿಯ ಮಾನ್ಯ ವಿರೋಧ ಪಕ್ಷದ ಉಪನಾಯಕರು ಹೇಳಿದರು. ನಾವು ಆಮದು ಮಾಡಿಕೊಳ್ಳುತ್ತಿಲ್ಲ, ಉತ್ತರ ಭಾರತದಲ್ಲಿ ನಮ್ಮ ಭಾಗದಿಂದ ಆಮದು ಮಾಡಿಕೊಳ್ಳುತ್ತಿದ್ದರು. ರಫ್ತಾಗುತ್ತಿತ್ತು ಈಗ ಅವರು ಅದನ್ನು ನಿಲ್ಲಿಸಿದ್ದಾರೆ. ಈ ಭಾಗದಿಂದ ಆ ಭಾಗಕ್ಕೆ ಅವರು ಆಮದು ಮಾಡಿಕೊಳ್ಳುತ್ತಿದ್ದರು. ನಾವು ರಫ್ತು ಮಾಡುತ್ತಿದ್ದೆವು. ಆ ಪರಿಸ್ಥಿತಿಯಿಂದಾಗಿ ಡಿಮಾಂಡ್ ಕಡಿಮೆಯಾಗಿರುವುದರಿಂದ ತೆಂಗು ಅಥವಾ ಕೊಬ್ಬರಿ ಇಮೊತ್ತು ಅಲ್ಲಿಗೆ ಹೋಗುತ್ತಿಲ್ಲ. ಆ ಪ್ರಯುಕ್ತ ರೇಟ್ ಕಡಿಮೆಯಾಗಿದೆ. ಅದು ಅಲ್ಲದೇ ಇಮೊತ್ತು ಕೇರಳದಲ್ಲಿ, ಆಂಧ್ರ ಪ್ರದೇಶದಲ್ಲಿ ಮತ್ತು ತಮಿಳುನಾಡಿನಲ್ಲಿ ನಮ್ಮ ಜೊತೆಗೆ ಅವರು ಕೊಬ್ಬರಿ ಮತ್ತು ತೆಂಗಿನ ಬೆಳೆಯಲ್ಲಿ ಕಾಂಪಿಟ್ ಮಾಡುತ್ತಿದ್ದಾರೆ. ಆ ಪ್ರಯುಕ್ತ ಕೂಡ ನಾವು ಆ ಭಾಗಕ್ಕೆ ನಮ್ಮ ತೆಂಗಾಗಲೀ, ಕೊಬ್ಬರಿಯಾಗಲಿ ಕಳಿಸುವುದಕ್ಕೆ ಆಗುತ್ತಿಲ್ಲ. ಈ ಸಂದರ್ಭದಲ್ಲಿ ರೈತರಿಗೆ ಆಗತಕ್ಕಂಥ ತೊಂದರೆಯನ್ನು ಮನಗಂಡು ನಮ್ಮ ಎ.ಪಿ.ಎಂ.ಸಿ. ಗಳ ಮೂಲಕ ಕೇಂದ್ರ ಸರ್ಕಾರಕ್ಕೆ ನಾವು ಬೆಂಬಲ ಬೆಲೆಯನ್ನು ಗಿಟಿಕೋಗೊಸ್ಕರ ಮನವಿಯನ್ನು ಮಾಡಿಕೊಂಡ ಮೇರೆಗೆ ಕೇಂದ್ರ ಸರ್ಕಾರದವರು ೨೭೨೫ ರೂಪಾಯಿ ಒಂದು ಬೆಂಬಲ ಬೆಲೆಯನ್ನು ನಿಗದಿ ಮಾಡಿ, ಈಗಾಗಲೇ ರಾಜ್ಯಕ್ಕೆ ಹತ್ತು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದಾರೆ. ಆ ಹತ್ತು ಕೋಟಿ ರೂಪಾಯಿಯನ್ನು ನಾವು ಈಗಾಗಲೇ ಟಿ.ಎ.ಪಿ.ಸಿ.ಎಂ.ಎಸ್‌ಗಳಿಗೆ ಕೊಟ್ಟು, ಅವುಗಳ ಮೂಲಕ ಇಮೊತ್ತು ಕರ್ನಾಟಕದಲ್ಲಿ ಕೊಬ್ಬರಿಯನ್ನು ಕೊಳ್ಳತಕ್ಕಂಥ ಪ್ರಯತ್ನ ಆಗುತ್ತಿದೆ, ಉತ್ತಮವಾದ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕು, ರೈತರಿಗೆ ಸಹಾಯ ಮಾಡಬೇಕು ಎನ್ನುವ ದೃಷ್ಟಿಯಿಂದ ಮತ್ತೆ ಇನ್ನು ಸಾಂಪ್ರದಾಯಿಕವಾದ ಎಣ್ಣೆಯನ್ನು ತೆಗೆಯತಕ್ಕಂಥ ಕೊಬ್ಬರಿಗೆ ೨೫೦೦ ರೂಪಾಯಿಯನ್ನು ಫಿಕ್ಸ್ ಮಾಡಿದ. ಆದರೆ ಇಮೊತ್ತು ನಾವು ಮಾರ್ಕೆಟಿನಲ್ಲಿ ನೋಡಿದಾಗ ದಿನ ನಿತ್ಯದ ರೇಟಿನಂತೆ ನಾಫೆಡ್ ನಮಗೆ ಕೊಟ್ಟಿರುವ ರೇಟಿನ ಪ್ರಕಾರ ನಿನ್ನೆ ಕೂಡ ೧೮೯೯ ಬ್ಯಾಗ್ಸ ಪರ್ಚೆಸ್ ಆಗಿದೆ. ಸುಮಾರು ೭೫೦ ಕ್ವಿಂಟಲ್ ನಾಫೆಡದಿಂದ ಪರ್ಚೆಸ್ ಆಗಿದೆ. ೨೭೨೫ ರೂಪಾಯಿ ದರದಂತೆ. ಅದೇ ಇಮೊತ್ತ ಅಲ್ಲಿ ಆಗಿರತಕ್ಕಂಥ ಒಂದು ಮರ್ಚೆಂಟ್ಸ್ ವ್ಯಾಪಾರದ ಕನಿಷ್ಟ ಬೆಲೆ ೨೪೦೦ ಚಿಲ್ಲರ. ಮ್ಯಾಕ್ಸಿಮಮ್ ಎಂದರೆ ೨೪೦೦ ರೂಪಾಯಿಗೆ ಹೋಗಿದೆ. ನಾವು ಸರ್ಕಾರದ ವತಿಯಿಂದ ಕೇಂದ್ರ ಸರ್ಕಾರದ ಸಹಾಯವನ್ನು ಬಯಸಿದ ಮೇಲೆ ೨೪೦೦ ರೂಪಾಯಿ ಹೋಗಿತ್ತು ಎಂದು ಹೇಳಲಿಕ್ಕೆ ಈ ಸಂದರ್ಭದಲ್ಲಿ ಬಯಸುತ್ತೇನೆ. ಜೊತೆಗೆ ಈ ಸದನದ ಹಿರಿಯ ಮಾನ್ಯ ಸದಸ್ಯರಾದಂತಹ ಶ್ರೀ ಶಿವನಂಜಪ್ಪರವರ ಎರಡನೇ ಪ್ರಶ್ನೆಯನ್ನು ಕೇಳಿರತಕ್ಕಂಥದ್ದು ಟಿ.ಎ.ಪಿ.ಸಿ.ಎಂ.ಎಸ್.ಗಳು ೧೧ ಗಂಟೆಯಾದರೂ ಕೂಡ ಬಾಗಿಲುಗಳನ್ನು ತೆಗೆಯುವುದಿಲ್ಲ ಎಂದು, ಎಲ್ಲೆಲ್ಲಿ ಈರೀತಿಯಾಗಿದೆ ಅಲ್ಲಿ ಕೂಡಲೇ ಸೂಚನೆಯನ್ನು ಕೊಡುತ್ತೇವೆ. ಅದೂ ಅಲ್ಲದೆ ನಮ್ಮ ಹಿರಿಯ ಸದಸ್ಯರು ಆದಂತಹ ಶ್ರೀ ಡಿ.ಕೆ. ಶಿವಕುಮಾರ್‌ರವರು ಕೇಳತಕ್ಕಂಥ ಸಂದರ್ಭದಲ್ಲಿ ಹೇಳಬೇಕಾದರೆ ಸರ್ಕಾರ ಉಳಿದ ಏಳು ಎಂಟು ಮಾರ್ಕೆಟಗಳು ಏನು ಇವೆ ಅಲ್ಲಿಯೂ ಕೂಡ ಕೊಳ್ಳಬೇಕು ಎಂದು

ಕೇಳಿದ್ದೀರಿ ಅದಕ್ಕೆ ಬದ್ಧವಾಗಿದೆ. ನಮಗೆ ಏನು ಬೇಕಾಗಿದೆ ಎಂದರೆ ಮಾರ್ಕೆಟಗಳ ಮೂಲಕ ನಾವು ಕೊಳ್ಳತಕ್ಕಂಥ ಸಂದರ್ಭದಲ್ಲಿ ಎಲ್ಲಾ ಟಿ.ಎ. ಪಿ.ಸಿ.ಎಂ.ಎಸ್.ನಲ್ಲಿ ನಡೆಸತಕ್ಕಂಥದ್ದಕ್ಕೆ ತಮ್ಮ ಸಹಕಾರ ಬೇಕು. ಅಲ್ಲಿ ಮಾಡಲಿಕ್ಕೆ ನಾವು ಬದ್ಧರಾಗಿದ್ದೇವೆ. ಅದು ಅಲ್ಲದೆ ಈಗ ನಾವು ಒಂದು ಸ್ಕೀಮನ್ನು ಕೂಡ ನಮ್ಮ ಇಲಾಖೆಯ ವತಿಯಿಂದ....

ಅಧ್ಯಕ್ಷರು : ಅದೆಲ್ಲಾ ಇರಲಿ, ನೀವು ಅಷ್ಟೇ ಅದಕ್ಕೆ ಸಂಬಂಧಪಟ್ಟ ಉತ್ತರ ಮಾತ್ರ ಕೊಡಿ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಬಿ. ನಿಂಗಯ್ಯ : ಆಯಿತು ಅಧ್ಯಕ್ಷರೆ.

ಶ್ರೀ ಬಿ. ನಂಜಾಮರಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು೨೭೨೫ ರೂಪಾಯಿಗಳಿಗೆ ನಿಗದಿ ಪಡಿಸಿದ ಬೆಲೆಗಳಿಗೆ ತಿಪಟೂರನಲ್ಲಿ ಈ ಟಿ.ಎ.ಪಿ.ಸಿ.ಎಂ.ಸಿ. ಮುಖಾಂತರ ಖರೀದಿ ಮಾಡುತ್ತೇವೆ ಎಂದು ಹೇಳಿದರು. ಆದರೆ ಅಲ್ಲಿ ಖರೀದಿ ಮಾಡುತ್ತಾ ಇಲ್ಲ. ದಿನಾಂಕ ೧೬.೮.೯೫ ರಲ್ಲಿ ೮೬೧೭ ಚೀಲ ಕೊಬ್ಬರಿ ಬಂದಿದೆ. ಆ ದಿವಸ ನಫೆಡನವರು ೧೭೨ ಚೀಲಗಳನ್ನು ಮಾತ್ರ ಖರೀದಿ ಮಾಡಿದ್ದಾರೆ. ದಿನಾಂಕ ೧೯.೮.೧೯೯೫ ರಂದು ೮೬೮೬ ಚೀಲಗಳು ಮಾರ್ಕೆಟ್‌ಗೆ ಬಂದಿದೆ, ಅದರಲ್ಲಿ ೫೯೩ ಚೀಲಗಳನ್ನು ಆ ದಿವಸ ನಬಾರ್ಡ್ ಬ್ಯಾಂಕ್ ಖರೀದಿ ಮಾಡಿದೆ. ಮತ್ತೆ ೨೩.೮.೯೫ ರಲ್ಲಿ ೮೮೦೧ ಚೀಲ ಮಾರ್ಕೆಟಗೆ ಬಂದಿತು, ಅದರಲ್ಲಿ ೪೯೯ ಚೀಲವನ್ನು ಖರೀದಿ ಮಾಡಿದ್ದಾರೆ. ಒಟ್ಟು ೧೬.೮ ರಿಂದ ಇಂದಿನ ರವರೆಗೆ ೨೬,೧೦೪ ಚೀಲ ಮಾರ್ಕೆಟಗೆ ಬಂದಿವೆ, ಅದರಲ್ಲಿ ೧೪೦೦ ಚೀಲಗಳನ್ನು ಒಟ್ಟಾರೆ ಖರೀದಿ ಮಾಡಿದ್ದಾರೆ. ೨೫,೦೦೦ ಚೀಲಗಳು ಉಳಿದಿವೆ. ಆ ೨೫ ಸಾವಿರ ಚೀಲ ರೈತರ ಕೊಬ್ಬರಿಯನ್ನು ನಬಾರ್ಡನಲ್ಲಿ ಖರೀದಿ ಮಾಡದೇ ಇರುವುದರಿಂದ, ವರ್ತಕರ ಮುಖಾಂತರ ಖರೀದಿ ಆಗಿರುವುದರಿಂದ ಒಂದು ಕ್ವಿಂಟಾಲಗೆ ೧೫೦ ರೂಪಾಯಿನಂತೆ ಹದಿನಾರು ಲಕ್ಷದ ಚಿಲ್ಲರೆ ರೂಪಾಯಿ ರೈತನಿಗೆ ಅನ್ಯಾಯವಾಗಿದೆ. ಟಿ.ಎ. ಪಿ.ಸಿ.ಎಂ.ಎಸ್. ಮುಖಾಂತರ ಇದುವರೆಗೆ ಬಂದಂಥ ಕೊಬ್ಬರಿಯ ಡೀಟೇಲ್ಸನ್ನು ನಾನು ಡೇಟಪೈಸ್ ತೆಗೆದುಕೊಂಡು ಬಂದಿದ್ದೇನೆ. ಖರೀದಿ ಮಾಡಿದ ಮೊದಲನೇ ದಿವಸ ೧೭೨ ಚೀಲ, ೧೯ನೇ ತಾರೀಖು...

ಅಧ್ಯಕ್ಷರು : ನನಗೆ ಅರ್ಥವಾಯಿತು. ನಾನು, ನಿಮಗೆ ಸಹಾಯ ಮಾಡುತ್ತೇನೆ....

ಶ್ರೀ ಬಿ. ನಂಜಾಮರಿ : ಅರಸೀಕೆರೆ, ಚಿಕ್ಕನಾಯಕನಹಳ್ಳಿ, ತುರವೇಕೆರೆಯಲ್ಲಿ ಮಾಲು ಮಾರ್ಕೆಟಗೆ ಬರುತಿತ್ತು. ಅಲ್ಲಿಯೂ ಕೂಡ ಟೋಟಲ್ ಹದಿನೈದು ಸಾವಿರ ಚೀಲ ಮಾರಾಟ ಆಗಿರಬಹುದು. ಅಲ್ಲಿ ಎಂಟು-ಹತ್ತು ಲಕ್ಷ ರೂಪಾಯಿ ಅನ್ಯಾಯವಾಗಿದೆ. ಆಮೇಲೆ ಟಿ.ಎ.ಪಿ.ಸಿ.ಎಂ.ಸಿ.ನಲ್ಲಿ ಏನು ತೊಂದರೆ ಇದೆ ಎಂದರೆ, ಎಷ್ಟು ಜನ ರೈತರು ತೆಗೆದುಕೊಂಡು ಹೋದರೂ ಒಂದೇ ಒಂದು ಚಿಂತೋಲೆ ಇಟ್ಟುಕೊಂಡು ಖರೀದಿ ಮಾಡುತ್ತಾರೆ. ಬೆಳಿಗ್ಗೆ ಹತ್ತು ಗಂಟೆಯಿಂದ ಸಾಯಂಕಾಲ ಒಂಭತ್ತು ಗಂಟೆಯವರೆಗೂ ತೂಕ ಮಾಡಿದರೂ ರೈತರಿಗೆ ತೂಕ ಆಗುವುದು ಐದನೂರರಿಂದ ಆರನೂರು ಚೀಲ ಮಾತ್ರ. ನಾಲ್ಕೈದು ಕಡೆ ಅದೇ ಮಾರ್ಕೆಟ್ನಲ್ಲಿ ಐದಾರು ಚಿಂತೋಲೆಹಾಕಿ ತೂಕ

ಮಾಡಿದರೆ ಒಂದು ಸ್ವಲ್ಪ ಮಾರ್ಕೆಟ್ ಇಂಪ್ರೂವ್ ಆಗುತ್ತದೆ. ಮತ್ತು ಕೊಬ್ಬರಿಯನ್ನು ಜಾಸ್ತಿ ತೂಕ ಮಾಡಬಹುದು. ಆದರೆ ಈಗ ನಾಲ್ಕು ತಿಂಗಳಿಂದ ಒಟ್ಟು ಐದು ಲಕ್ಷ ಚೀಲ ಮಾರಾಟ ಮಾಡಿದ ರೈತರಿಗೆ ಸುಮಾರು ಆರುಕೋಟಿ ರೂಪಾಯಿಯ ಅನ್ಯಾಯವಾಗಿದೆ.

ಅಧ್ಯಕ್ಷರು : ಆಯಿತು. ಒಂದು ನಿಮಿಷ ತಡೆಯಿರಿ. ಕೇಳಿದ್ದೀರಲ್ಲ. ಕುಳಿತುಕೊಳ್ಳಿ. ನಿಮಗೆ ವಿಷಯ ಅರ್ಥವಾಯಿತೋ. ರೈತರು ಎಷ್ಟು ಪ್ರಮಾಣದಲ್ಲಿ ತೆಂಗನ್ನು ಬೆಳೆಯುತ್ತಿದ್ದಾರೆ ಅಷ್ಟು ಪ್ರಮಾಣದಲ್ಲಿ ಮಾರ್ಕೆಟಿಗೆ ತೆಗೆದುಕೊಂಡು ಹೋಗುತ್ತಾರೆ. ನಿಮ್ಮ ಟಿ.ಎ.ಪಿ.ಸಿ.ಎಂ.ಸಿ ನವರು ಅಷ್ಟು ಪೂರ್ತಿಯನ್ನು ಖರೀದಿ ಮಾಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಸರ್ಕಾರ ಏನು ನೀವು ಘೋಷಿಸಿದ ಬೆಂಬಲ ಬೆಲೆ ಕೊಡುತ್ತಿದ್ದೀರಿ ಅದರ ಫಾಯಿದೆ ಪಡೆದುಕೊಳ್ಳಲು ಹೋಗ್ತಾ ಇರತಕ್ಕಂಥ ರೈತರಿಗೆ ನಿರಾಶೆ ಆಗುತ್ತಿದೆ. ರೈತ ತಾನು ಬೆಳೆಯತಕ್ಕಂಥ ಬೆಳೆಯನ್ನು ಕಡಿಮೆ ಬೆಲೆಗೆ ಮಾರಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ ಎಂದು ಹೇಳುತ್ತಾರೆ. ಅದಕ್ಕೆ ಏನು ಉತ್ತರ ಹೇಳುತ್ತೀರಿ ಹೇಳಿ?

ಶ್ರೀ ಬಿ.ಬಿ ನಿಂಗಯ್ಯ : ಸದಸ್ಯರು ಹೇಳತಕ್ಕಂಥದ್ದು ನಿಜ. ಬೆಲೆ ಕಡಿಮೆ ಆಗಿರತಕ್ಕಂಥದ್ದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ನಾವು ಕೊಳ್ಳಲಿಕ್ಕೆ ನಮಗೆ ಹಣದ ತೊಂದರೆ ಇಲ್ಲ. ಸಾಕಷ್ಟು ಹಣಕಾಸಿನ ಪರಿಸ್ಥಿತಿ ಇದೆ. ಕೊಂಡುಕೊಳ್ಳಲು ತಯಾರಿದ್ದೇವೆ. ತಿಪಟೂರು ಕೊಬ್ಬರಿ ಮಾರಾಟದ ಬಗ್ಗೆ ತಮಗೆ ಹೇಳಬೇಕು ಎಂದರೆ ದಿನಾಂಕ ೨೩.೮.೧೯೯೫ನೇ ತಾರೀಖು ಒಟ್ಟು ೮೮೦೧ ಮೂಟೆಗಳು ಮಾರ್ಕೆಟಿಗೆ ಬಂದಿದೆ. ಎಷ್ಟು ಬಂದಿದೆ ಅಷ್ಟನ್ನು ಪೂರ್ತಿ ಕೊಂಡುಕೊಳ್ಳಲಿಕ್ಕೆ ಸರ್ಕಾರ ಬದ್ಧವಾಗಿದೆ. ರೈತರ ಪರವಾಗಿ ನಿಂತು ಮಾಡುತ್ತೇವೆ.

ಶ್ರೀ ಬಿ. ನಂಜಾಮರಿ : ರೈತರು ತೆಗೆದುಕೊಂಡು ಹೋದರೆ ಪೂರ್ಣ ತೂಕ ಎಷ್ಟು ಆಗುತ್ತದೆ ಅಷ್ಟು ಮಾಡುತ್ತೇವೆ ಎಂದು ಹೇಳುತ್ತಾರೆ. ಅದನ್ನು ನಾಲ್ಕೈದು ಕಡೆ ಚಿಂತೋಲೆ ಹಾಕಿ ಮಾಡಿದರೆ ಸಾಧ್ಯವಾಗುತ್ತದೆ. ಒಂದು ಕಡೆಯಿಂದ ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನೇನು ಅದಕ್ಕೆ ಉಪ ಪ್ರಶ್ನೆಯನ್ನು ಕೇಳುವುದಿಲ್ಲ. ಆದರೆ ನಮಗೆ ಅರ್ಥವಾಗುವುದಿಲ್ಲ. ಅದಕ್ಕಾಗಿ ಅದ ಏನು ಎಂದು ದಯವಿಟ್ಟು ಸ್ವಲ್ಪ ತಿಳಿಸಿ.

ಶ್ರೀ ಸಿ. ಭೈರೇಗೌಡ : ಅಧ್ಯಕ್ಷರೇ, ಅವರು ಹೇಳಿದಂತಹ ಸಮಸ್ಯೆ ಆ ಮಾರಾಟ ಕೇಂದ್ರಗಳಲ್ಲಿ ಇದ್ದರೆ, ಆ ಸಮಸ್ಯೆಯನ್ನು ಸರ್ಕಾರ ಬಗೆಹರಿಸತಕ್ಕಂಥ ಎಲ್ಲಾ ಕ್ರಮವನ್ನು ತೆಗೆದುಕೊಳ್ಳತ್ತದೆ. ರೈತರ ರಕ್ಷಣೆ ಮಾಡಬೇಕಾಗಿರತಕ್ಕಂಥದ್ದು ನಮ್ಮ ಕರ್ತವ್ಯ. ನೀವು ಹೇಳಿರತಕ್ಕಂಥ ಸಮಸ್ಯೆ ಎಲ್ಲೆಲ್ಲಿ ಇದೆಯೋ ಅಲ್ಲಿ ಆ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಎಲ್ಲಾ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ನಂಜಾಮರಿ : ಮಾರ್ಕೆಟಿಗೆ ಬಂದ ಕೊಬ್ಬರಿಯನ್ನು ಅವತ್ತಿನದನ್ನು ಅವ್ವೂತ್ತು ಖರೀದಿ ಮಾಡಬೇಕು. ಈಗ ನೋಡಿ ೮೮೦೧ ಚೀಲ ಬಂದ ದಿವಸ ೧೭೬ ಚೀಲವನ್ನು ನಬಾರ್ಡ್‌ನವರು ಖರೀದಿ ಮಾಡಿದ್ದಾರೆ....

ಶ್ರೀ ಟಿ.ಬಿ. ಜಯಚಂದ್ರ : ಬೆಂಬಲ ಬೆಲೆಯನ್ನು ಕೊಡಿಸಿದರೇ ಬೈರೇಗೌಡರು. ತಾವು ಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ನೀವು ತೀರ್ಮಾನವಾಗಿ ಸಹಾಯ ಆಗದಿದ್ದರೆ ಏನು ಪ್ರಯೋಜನ. ಎಲ್ಲಾ ಮಾರ್ಕೆಟನಲ್ಲಿ ಕೊಂಡುಕೊಳ್ಳತಕ್ಕಂಥ ಪ್ರಯತ್ನ ಮಾಡಬೇಕು.

ಶ್ರೀ ಸಿ. ಬೈರೇಗೌಡ : ಅದನ್ನೇ ಹೇಳಿದ್ದೇನಲ್ಲ. ನೀವು ಹೇಳತಕ್ಕಂಥ ಸಮಸ್ಯೆ ರಾಜ್ಯದಲ್ಲಿ ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲಾ ಕೊಬ್ಬರಿಯನ್ನು ಕೊಂಡುಕೊಳ್ಳತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಎಷ್ಟು ದಿವಸದಿಂದ ಮಾಡುತ್ತೀರಿ?

ಅಧ್ಯಕ್ಷರು : ಮೂರು ದಿವಸದಲ್ಲಿ ಮಾಡುತ್ತೇವೆ ಎಂದು ಹೇಳಿ ಬಿಡಿ. ಎಷ್ಟು ದಿವಸ ಎಂದು ಕೇಳುತ್ತಿದ್ದಾರೆ. ಮೂರು ದಿವಸ ಎಂದು ಹೇಳಿ. ನಮ್ಮ ಡಿಸ್ಟ್ರಿಕ್ಟ್‌ನವರು ಹೆದರುತ್ತೇವಾ. ಹೇಳಿ ಮೂರು ದಿವಸ ಎಂದು.

ಶ್ರೀ ಸಿ. ಬೈರೇಗೌಡ : ಆದಷ್ಟು ಜಾಗ್ರತೆ ಒಂದೆರಡು ದಿವಸದಲ್ಲಿ ಅದನ್ನು ಮಾಡುತ್ತೇವೆ.

ಶ್ರೀ ಬಿ. ನಂಜಾಮರಿ : ತಿಪಟೂರು, ಅರಿಸೀಕೆರೆ, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಹುಳಿಯಾರು ಎಲ್ಲಾ ಕಡೆಗೂ ಖರೀದಿ ಮಾಡಬೇಕು.

(ಗೊಂದಲ)

ಶ್ರೀ ಸಿ. ಬೈರೇಗೌಡ : ಈ ಸಮಸ್ಯೆ ಎಲ್ಲೆಲ್ಲಿ ಇದೆಯೋ, ಅಲ್ಲೆಲ್ಲಾ ಕೊಬ್ಬರಿಯನ್ನು ಕೊಂಡುಕೊಳ್ಳತಕ್ಕಂಥ ವ್ಯವಸ್ಥೆಯನ್ನು ಖಂಡಿತ ಮಾಡುತ್ತೇವೆ. ರೈತರು ಬೀದಿ ಪಾಲಾಗುವುದಕ್ಕೆ, ಅವರಿಗೆ ನಷ್ಟ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಬಿ. ನಂಜಾಮರಿ : ಅಧ್ಯಕ್ಷರೇ.....

ಅಧ್ಯಕ್ಷರು : ಅದನ್ನು ತೆಗಿಯಿರಿ ಕಿವಿಯಿಂದ. ಅವರು ಏನು ಹೇಳಿದ್ದಾರೆಂದು ಕೇಳುವುದಿಲ್ಲವೇ? ನಾನು ಹೇಳುತ್ತೇನೆ ಕೇಳಿ ನನ್ನ ಹತ್ತಿರ ಎರಡು ಮೈಕ್ ಇವೆ. ಒಂದೆರಡು ದಿವಸದಲ್ಲಿ ವ್ಯವಸ್ಥೆ ಮಾಡುತ್ತೇವೆ, ರೈತರಿಗೆ ತೊಂದರೆ ಆಗದಂತೆ ನೋಡುತ್ತೇವೆ. ರಾಜ್ಯದ ಎಲ್ಲಾ ಕಡೆ ಎಷ್ಟು ಮಾಲು ಬಂದರೂ ಅದನ್ನು ಕೊಂಡುಕೊಳ್ಳಲು ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ವಿಚಾರ ಸಾಕಷ್ಟು ಚರ್ಚೆಯಾಗಿದೆ. ಅದಕ್ಕಾಗಿ ಈ ಸಂದರ್ಭದಲ್ಲಿ ನಾನು ಒಂದೇ ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ರಾಜ್ಯದ ನಾಲ್ಕೈದು ಜಿಲ್ಲೆಗಳಲ್ಲಿ ಇಮೊತ್ತು ಅನೇಕ ಹೆಚ್ಚು ರೈತರು ಈ ಒಂದು ತೆಂಗಿನ ಬೆಳೆಯ ಮೇಲೆ ತಮ್ಮ ಜೀವನವನ್ನು ಆಧಾರವಾಗಿ ಇಟ್ಟುಕೊಂಡಿದ್ದಾರೆ. ಕೊಬ್ಬರಿ ಬೆಲೆ ಕುಸಿದಿದ್ದರಿಂದ, ಮಾರ್ಕೆಟ್ ವ್ಯವಸ್ಥೆ ಸರಿಯಾಗಿಲ್ಲದೇ ಬಹಳಷ್ಟು ತೊಂದರೆಯಾಗಿರುವುದರಿಂದ,

ಹೊಸದಾಗಿ ರೈತರು ತೆಂಗನ್ನು ಬೆಳೆಯುವುದಕ್ಕೆ ಹಿಂದೆಮುಂದೆ ನೋಡುತ್ತಿದ್ದಾರೆ. ಏಕೆಂದರೆ ಅವರು ಮುಂದೆ ಬೆಳೆಯತಕ್ಕಂಥ ಬೆಳೆಗೆ ಸರಿಯಾದ ಬೆಲೆ ಸಿಗದಿರುವುದು ಮತ್ತು ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದೇ ಕಾರಣವಾಗಿದೆ. ದಯಮಾಡಿ ಸರ್ಕಾರದವರು ಈ ಎಲ್ಲಾ ಸಮಸ್ಯೆಗಳನ್ನು ಮತ್ತು ರೈತರ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಈ ಮಾರುಕಟ್ಟೆ ವ್ಯವಸ್ಥೆಯನ್ನು ಸರಿಯಾಗಿ ಮಾಡಬೇಕು ಮತ್ತು ರೈತರಿಗೆ ಅವರು ಬೆಳೆದ ತೆಂಗಿಗೆ ಸರಿಯಾದ ಬೆಂಬಲ ಬೆಲೆ ಸಿಗತಕ್ಕಂಥ ಒಂದು ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವರಾಮ್ : ಮಾನ್ಯ ಅಧ್ಯಕ್ಷರೇ, ಅರಸಿಕರೆ ಪ್ರಮುಖವಾದಂಥ ಮಾರುಕಟ್ಟೆ. ಅಲ್ಲಿ ಪ್ರಾಕ್ಟಿಕಲ್ ಡಿಫೆಕ್ಟ ಏನಿದೆಯೆಂದು ನಾನು ಹೇಳಿಬಿಡುತ್ತೇನೆ. ಅವರು ಅದನ್ನು ಸಾಲ್ವ ಮಾಡಿದರೆ ಸಾಕು. ಮಾರುಕಟ್ಟೆಗೆ ಎಷ್ಟು ಪ್ರಮಾಣದಲ್ಲಿ ತೆಂಗು ಬರುತ್ತದೆ, ಅದರಲ್ಲಿ ಅವರು ಗ್ರೇಡಿಂಗ್ ಮಾಡತಕ್ಕಂಥದ್ದರಲ್ಲಿ ವ್ಯತ್ಯಾಸವಾಗುತ್ತಿದೆ. ಮಾರುಕಟ್ಟಗೆ ೨೫೦ ಚೀಲ ತೆಂಗು ಬಂದರೆ, ಅದರಲ್ಲೂ ರೂ. ೨,೭೨೫ ರಂತೆ ಒಳ್ಳೆಯ ಕ್ವಾಲಿಟಿಯ ಒಂದಿಪ್ಪತ್ತು ಚೀಲವನ್ನು ಮಾತ್ರ ತೆಗೆದುಕೊಳ್ಳುವುದು ಉಳಿದಿದ್ದನ್ನು ಹಾಗೆಯೇ ಕೈ ಬಿಡತಕ್ಕಂಥ ಪರಿಸ್ಥಿತಿ ಇದೆ. ಆದುದರಿಂದ ಸಪೋರ್ಟಿಂಗ್ ಪ್ರೈಸ್ ಏನಿದೆ ಅದನ್ನು ಆಧಾರವನ್ನಾಗಿ ಇಟ್ಟುಕೊಂಡು ಗ್ರೇಡಿಂಗ್ ಮಾಡತಕ್ಕಂಥದ್ದರ ಮೂಲಕ ಪೂರ್ಣ ಪ್ರಮಾಣದ ಕೊಬ್ಬರಿಯನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಅವರು ಮಾಡಬೇಕು.

ಶ್ರೀ ಸಿ. ಬೈರೇಗೌಡ : ಇದು ಕೇಂದ್ರ ಸರ್ಕಾರದಿಂದ ಬೆಂಬಲ ಬೆಲೆಯನ್ನು ನಿಗದಿ ಪಡಿಸಿರತಕ್ಕಂಥದ್ದು. ಕೇಂದ್ರ ಸರ್ಕಾರದ ಸೂಚನೆಗಳು ಏನಿವೆ ಆ ಸೂಚನೆಯನ್ನು ಅನುಸರಿಸಿ ಅದನ್ನು ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ನಾವು ಬಹಳ ಶ್ರಮವನ್ನು ವಹಿಸಿದ್ದೇವೆ. ಈ ನಮ್ಮ ಶ್ರಮವನ್ನು ನೀವು ಯಾರೂ...

ಶ್ರೀ ಟಿ.ಬಿ. ಜಯಚಂದ್ರ : ನಾನು ಹೇಳಿದ್ದುದು, ಇದು ಸಂಪೂರ್ಣವಾಗಿ ಜಾರಿಗೆ ಬರುವುದಕ್ಕೆ ನೀವೇ ಕಾರಣ ಮತ್ತು ಮೂಲ ಪುರುಷರು ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಈ ಮಾತನ್ನು ನಾನು ಸೂಮಾರು ೬-೭ ತಿಂಗಳಿನಿಂದಲೂ, ನೀವು ಮಂತ್ರಿಯಾದಾಗಿನಿಂದಲೂ ಹೇಳಿದ್ದೇನೆ. ಇದು ಹೋರಾಟ ನಡೆಸಿರತಕ್ಕಂಥದ್ದು, ತಾವು ನಮ್ಮ ಜೊತೆ ಚರ್ಚೆ ಮಾಡಿರತಕ್ಕಂಥದ್ದು, ಕೇಂದ್ರ ಸರ್ಕಾರದ ಸಚಿವರ ಜೊತೆ ಚರ್ಚೆ ಮಾಡಿರತಕ್ಕಂಥದ್ದು ಇದು ನಮ್ಮೆಲ್ಲರಿಗೂ ಗೊತ್ತಿರತಕ್ಕಂಥದ್ದು. ನಾನು ಈಗ ವಿರೋಧ ಪಕ್ಷದಲ್ಲಿ ಕುಳಿತು ಅಭಿನಂದನೆಯನ್ನು ಕೂಡ ಸಲ್ಲಿಸುತ್ತಿದ್ದೇನೆ. ಆದರೆ ಇದರಲ್ಲಿ ಪ್ರಯೋಜನ ಆಗುತ್ತಿಲ್ಲ ಎನ್ನತಕ್ಕಂಥದ್ದು ಒಂದು ವಿಷಾದದ ವಿಷಯ.

ಶ್ರೀ ಸಿ. ಬೈರೇಗೌಡ : ರೈತರಿಗೆ ಅನ್ಯಾಯ ಆಗದ ರೀತಿಯಲ್ಲಿ ಕೇಂದ್ರ ಸರ್ಕಾರದ ಸೂಚನೆಗಳು ಏನಿವೆ ಆ ಸೂಚನೆಗಳನ್ನು ಅನುಸರಿಸಿ ಎಲ್ಲಾ ಕೊಬ್ಬರಿಯನ್ನು ಕೊಂಡು ಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ. ರಾಜ್ಯದ ಎಲ್ಲಾ ಕಡೆ ಈ ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರು : ಇಲ್ಲಿಗೆ ಈ ವಿಷಯ ಮುಕ್ತಾಯವಾಯಿತು. ದಿನಾಂಕ ೨೫ನೇ ಆಗಸ್ಟ್ ೧೯೯೫ರ ಚುಕ್ಕೆ ಗುರುತಿನ ಪ್ರಶ್ನೆಗಳು, ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ ೯ನೇ ಪಟ್ಟಿಯನ್ನು ೧೫೩ ಪ್ರಶ್ನೆಗಳ ೧೧೮ ಪ್ರಶ್ನೆಗಳಿಗೆ ಬಂದಿರುವ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಗಿದೆ.